ನಂತರ ಇದು ಆಗಿರತಕ್ಕಂಥದ್ದು ಇದನ್ನು ಶಿವಸೇನೆಯವರು ಮಾಡಿದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಇದು ಏನಾಗಿದೆ ಎಂದರೆ ಆ ಸಮಾರಂಭದಲ್ಲಿ ಭಾಗವಹಿಸಿ ವಾಪಸ್ಸು ಜನಗಳು ಹೋಗುವಾಗ ಗಲಾಟೆಯಾಗಬಹುದೆಂದು ಅಲ್ಲಿರತಕ್ಕ ಎಲ್ಲಾ ಹೋಟೆಲ್ ಅಂಗಡಿಗಳವರಿಂ ಬಾಗಿಲನ್ನು ಹಾಕಿಬಿಟ್ಟಿದ್ದರು. ಆ ಸಮಾರಂಭಕ್ಕೆ ಬಂದವರಿಗೆ ಊಟ, ತಿಂಡಿಯ ವ್ಯವಸ್ಥೆ ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ. ಅವರು ವಾಪಸ್ಸು ಹೋಗುವಾಗ ಹೋಟೆಲ್ ಅಂಗಡಿಗಳು ಮುಚ್ಚಿದ್ದರಿಂದ ಅವರಿಗೆ ಕೋಪ ಸಿಟ್ಟು ಬಂದು ಆ ರೀತಿ ಮಾಡಿದ್ದಾರೆ. ಯಾರೂ ಸಹ ಬೇಕಾಗಿ ಆದನ್ನು ಮಾಡಿಲ್ಲ, ಆ ರೀತಿ ಬೇಕಾಗಿಯೇ ಮಾಡಿದ್ದಾರೆಂದು ಹೇಳುವುದಕ್ಕೂ ಬರುವುದಿಲ್ಲ. ಯಾರೋ ಇನ್ನೊಬ್ಬರು ಪ್ರಚೋದನೆ ಮಾಡಿದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ ಅನೇಕ ಮಾರಾಠಿಗಳ ಅಂಗಡಿಗಳು ಸಹ ಲೂಟಿಯಾಗಿದೆ. ಲೂಟಿ ಎಂದರೆ ಏನ್ನು, ಅಲ್ಲಿದ್ದಂಥ ತಿಂಡಿಯನ್ನು ತಿಂದು ಬಿಟ್ಟು ಹೋಗುವಾಗ ಸ್ವಲ್ಪ ಗಲಾಟೆ ಮಾಡಿ ಹೋಗಿದ್ದಾರೆ. ಇಂಥಾ ಪರಿಸ್ಥಿತಿ ಉಂಟಾಗಬಾರದಿತ್ತು ಎಂದು ಮಹಾರಾಷ್ಟ್ರದ ವಿಧಾನಸಭೆಯಲ್ಲೂ ಸಹ ಅಲ್ಲಿನ ಮಾನ್ಯ ಮುಖ್ಯಮಂತ್ರಿಗಳವರು ಭರವಸೆ ಕೊಟ್ಟಿದ್ದಾರೆ. ಮತ್ತೆ ಇಷ್ಟೇ ಅಲ್ಲ ಅವರು ಕನ್ನಡ ಸಂಘದ ಸಭೆಯಲ್ಲಿ ಮಾತನಾಡುತ್ತಾ, ಇನ್ನು ಮುಂದೆ ಇಂಥಾ ಸಭೆಗಳು ನಡೆದಾಗ ಯಾವ ಪಕ್ಷದವರದೇ ಸಭೆಯು ನಡೆಯಲಿ ನಡೆದಾಗ ಸಾಕಷ್ಟು ಬಂದೋಬಸ್ತು ಮಾಡುತ್ತೇವೆ. ಎಲ್ಲಾ ಅಂಗಡಿ, ಹೋಟೆಲ್‌ಗಳನ್ನು ಮುಚ್ಚದೇ ತೆರೆದಿರತಕ್ಕದರ ಬಗ್ಗೆ ವ್ಯವಸ್ಥೆ ಮಾಡುತ್ತೇವೆ, ಈ ರೀತಿ ಅಹಿತಕರ ಘಟನೆಗಳು ನಡೆಯದ ಹಾಗೆ ಮುನ್ನೆಚ್ಚರಿಕೆಯ ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಮತ್ತೆ ನಮ್ಮ ಕರ್ನಾಟಕದವರಿಗೆ ಏನು ನಷ್ಟ ಹೆಚ್ಚಾಗಿದೆ ಅದಕ್ಕೆ ಕೂಡ ಪರಿಹಾರ ಕೊಡಬೇಕೆಂದು ಕೇಳಿದ್ದಕ್ಕೆ ಅದಕ್ಕೂ ಸಹ ಅವರು ಒಪ್ಪಿಕೊಂಡಿದ್ದಾರೆ. ಈಗಾಗಲೇ ಉನ್ನತ ಮಟ್ಟದ ಸಮಿತಿ ರಚನೆಯಾಗಿದ್ದು ಇನ್ನು ಮುಂದೆ ಕರ್ನಾಟಕ ಜನತೆಗೇ ಆಗಲೀ ಅಥವಾ ದಕ್ಷಿಣ ಕನ್ನಡದ ಜನತೆಗೇ ಆಗಲೀ ತೊಂದರೆಯಾಗದ ಹಾಗೆ ರಕ್ಷಣೆ ಕೊಡುವುದಾಗಿ ಭರವಸೆಯನ್ನು ಅಲ್ಲಿನ ಮುಖ್ಯಮಂತ್ರಿಗಳವರು ಕೊಟ್ಟಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಅವತ್ತಿನ ದಿವಸ ನಮ್ಮ ಶ್ರೀ ಸೈಯನಕ್‌ರವರು ಆ ಸಮಾರಂಭದಲ್ಲಿ ಭಾಗವಹಿಸಿದ್ದರು. ಯಾವ ಕಾರಣಕೋಸ್ಕರವಾಗಿ ಈ ಘಟನೆ ನಡೆಯಿತು ಎನ್ನುವ ವಿಷಯವನ್ನು ಆ ದಿವಸ ಈ ಸಭೆಯಲ್ಲಿ ತಿಳಿಸಿದ್ದರೆ ಈ ಪ್ರಶ್ನೆ ತಿಳಿಯಾಗುತ್ತಿತ್ತು. ಆದರೆ ಅವತ್ತು ಶ್ರೀ ಸೈಯಾನಕ್ ರವರು ಈ ವಿಷಯವನ್ನು ಹೇಳಲಿಲ್ಲ.

SRI R. GUNDU RAO.—How can Mr. Sayanak know all these things? He was at one end and the morcha was in the other end.

SRI B. B. SAYANAK.—They were charging that Maharashtra Government has instigated the morcha to loot the Kannadigas. I said that was not correct. Sri Ramdev had charged.....

SRI MATHIKATTI.— Mr. Sayanak is not a representative of Maharashtra Government.

SRI B. B. SAYANAK.—Who told him Sir, have I said it?

ಅಧ್ಯಕ್ಷರು:— ಸಾರ್ವಜನಿಕವಾಗಿ ಅತ್ಯಂತ ಮಹತ್ವವಾದ ಗಮನ ಸೆಳೆಯುವ ಸೂಚನೆಗಳು, ಶ್ರೀಯುತರುಗಳಾದ ಟಿ. ಚೌಡಯ್ಯ, ಎಂ. ಸಿ. ಬಸಪ್ಪ ಮತ್ತು ಶ್ರೀ ಎಸ್. ಲಿಂಗಯ್ಯನವರಿಂದ.

ಗಮನ ಸೆಳೆಯುವ ಸೂಚನೆ

ವಿಷಯ. —ಗಂಗಾವತಿ ತಾಲ್ಲೂಕಿನಲ್ಲಿ ಬಗರ್ ಹುಕುಂನಲ್ಲಿರುವ ಸಾವಿರಾರು ಎಕರೆಯಲ್ಲಿ ಬಡವರಿಗೆ ಕೊಟ್ಟಿರತಕ್ಕ ಜಮೀನನ್ನು ಶ್ರೀಮಂತರು ಪಶಪಡಿಸಿಕೊಂಡಿರುವ ಬಗ್ಗೆ.

ಶ್ರೀ ಟಿ. ಚೌಡಯ್ಯ.—ಸ್ವಾಮಿ, ಗಂಗಾವತಿ ತಾಲ್ಲೂಕಿನಲ್ಲಿ ಬಗರ್ ಹುಕುಂನಲ್ಲಿರುವ ಸಾವಿರಾರು ಎಕರೆಯಲ್ಲಿ ಬಡವರಿಗೆ ಕೊಟ್ಟಿರತಕ್ಕ ಜಮೀನನ್ನು ಶ್ರೀಮಂತರು ಪಶಪಡಿಸಿಕೊಂಡಿರತಕ್ಕ ಈ ಒಂದು

ಸಂಧರ್ಭದಲ್ಲಿ ಮಾನ್ಯ ಕಂದಾಯ ಮಂತ್ರಿಗಳವರ ಗಮನವನ್ನು ಸೆಳೆಯ ಬಯಸುತ್ತಿದ್ದೇನೆ,

SRI MALLIKARJUN M. KHARGE (Minister for Revenue).—Sir, I would like to make the following statement.

The main issue raised by the Hon'ble Members in the notice relates to the hardship caused to the poor and land less persons in Gangavathi taluk and their helplessness in getting the lands granted to them by the Government which are stated to be now occupied and encroched upon by the rich land-lords. At the outset, it may be stated that these allegations are vague and lack in material particulars. However, from the report made by the Deputy Commissioner, Raichur district.. it is seen that most of the encroachments in Gangavathi taluk are done by poor landless SC/ST persons whose cases are being considered for regularisation/grant of land in accordance with the G. O. No. RD 105 LGP 77, dated 1-9-1977 and the instrcutions issued from time to time in this regard. The factual particulars in respect of the different survey numbers in six villages reported by the Deputy Commissioner, Raichur, are as under.—

i) S. No. 3/1 of Rangapur village measures 345 acres 36 guntas out of which 84 acres and 34 guntus are patta lands covering 16 pattadars. There are 21 unauthorised cultivators, and the encrochment ranges from 20 guntas to 2 acres, cultivating in all 19 acres and 12 guntas and the remaining portion is a hillock. These encroachers are landless persons. Therefore they are entitled to regularisation of lands in their favour as per the aforesaid Government. Order dated 1-9-1977.

ii) S. No. 39/1 of Basavandurga village measures 462 acores 24 guntas, out of which 22 acres and 25 guntas are under unauthorised occupation by 17 persons these person sare landless belonging to SC/ST and other backward classes and they are entitled to regularisation as per the Government Order dated 1-9-1977 which will be done shortly. One Sri Thimma Reddy has been unauthorisedly occupying 2 acres and 30 guntas in the aforesaid survey number. His son is owning 4 acres of land in the same village. The matter is being examined as whether Sri Thimma Reddy should be considered as a landless person or an insufficient holder and action will be taken to evict him if he is proved to be ineligible for grant.

iii) In Sy. No. 7 of Anjanahally village 2 persons, *vtz.*, Guramma and Basamma are unautorisedly cultivating land to the extent of one acre 10 guntas each. As they are landless persons, action is being taken to regularise this encroachment, One Sri Krishua Reddy,

to whom an extent of 2 acres has boen granted in the said survey number is reported to be a sufficient holder as his wife owns 6 acres and 7 guntas of land. Therefore, action is being taken to cancel the grant made in his favour.

iv) In Sy. No. 19 of Rampur village 11 persons have unauthorisdly occupied the land. Except one person all the other 10 persons are landless who are in occupation of lands ranging from 20 guntas to 2 acres, whose cases are being considered for regularisation.

v) In Sy. No. 10 of Bagalapur village, 13 persons were granted land to an extent of 21 acres and 30 guntas ranging from 1 acre to 2 acres 30 guntas. Some grantees are not cultivating the lands granted to them, as they left the village and these lands are lying fallow. Action is being taken by the Tahasildar to take possession tof these lands as per rules. However, these lands are not encroached by any others.

vi) In Sy. N. 193 of Anegundi village, one Sri Siddapur Mallappa has encroached 5 acres of land, but he has cultivated only two acres of land. As he is a sufficient holder, proceedings have been initiated to evict him from the land.

2 From the above, it may kindly be seen that landless and insufficient holders mostly belonging to SC/STs and backward classes are in occupation of Government lands unauthorisedly and in whose case action has been taken to regularise their unauthorised occupation.

3 Further, I may state that so far, 71 sufficient land holders have been evicted from their unauthroised occupation involving an entent of 252 acres and 26 guntas. Besides there are 40 encroachers who are sufficient holders in occupation of 108 acres and 12 guntas. Action has been initiated to evict them also as per Rules.

4 Further, as per the Karnataka Scheduled Castes and Scheduled Tribes (Prohibition of Transfer of Certain Lands) Act, 1978, 103 cases of alienations of granted lands involving an extent of 245 acres and 10 guntas in which violations have taken place have been detected, and action has been intiated by the Assistant Commissioner, Koppal Sub-Division, to restore the land to the original grantees, who are persons belonging to Scheduled Castes and Scheduled Tribes.

ಶ್ರೀ ಟಿ. ಜೌಡಯ್ಯ.—ಮಾನ್ಯ ಮಂತ್ರಿಗಳು ಕೊಟ್ಟಂತಹ ಹೇಳಿಕೆ ಪ್ರಕಾರ ಎಲ್ಲ ಸರ್ವೆ ನಂಬರುಗಳು ಕೂಡ ಅನ್ ಆಥರೈಸ್ಡ್ ಕಲ್ಟಿವೇಷನ್ ಆಗಿವೆ. ಆದರಲ್ಲಿ ಸ್ವಲ್ಪ ಜಮೀನು ಕೆಲವರಿಗೆ ಮಂಜೂರಾಗಿದೆ. ಹೀಗೆ ಮಂಜೂರಾಗಿರತಕ್ಕ ಸರ್ವೆ ನಂಬರ್‌ಗಳಲ್ಲಿ ಎಷ್ಟು ಜಮೀನನ್ನು ತೋರಿಸಿ

ದ್ದೀರಿ ಆದನ್ನು ಎಸ್. ಸಿ. ಎಸ್. ಟಿ. ಯವರಿಗೆ ಆಗಲೀ ಅಥವಾ ಬೇರೆ ಜಮೀನು ಇಲ್ಲದ ಜನರಿಗೆ ಯಾವಾಗ ಮಂಜೂರ್ಮಾಡಿದ್ದೀರಿ ಮತ್ತು ಇದುವರೆಗೆ ಏತಕ್ಕೆ ಅವರ ಸ್ವಾಧೀನಕ್ಕೆ ಕೊಟ್ಟಿಲ್ಲ ?

ಶ್ರೀ ಎಂ. ಸಿ. ಬಸಪ್ಪ.—ತಾವು ತಮ್ಮ ಹೇಳಿಕೆಯಲ್ಲಿ ಜಮೀನನ್ನು ಮಂಜೂರ್ಮಾಡಿದ್ದೇವೆ ಆದರೆ ಪೊಸೆಷನ್ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಅಂದರೆ at the time of grant if the land was already under unauthorised occupation of some people, under the revenue rules ತಮ್ಮ ಅಧಿಕಾರಿಗಳು ಜಮೀನನ್ನು ಕೊಡುವುದಕ್ಕೆ ಬರುವುದಿಲ್ಲ. ಮೊದಲು ಯಾರು ಎನ್‌ಕ್ರೋಚ್ ಮಾಡಿದ್ದಾರೆ ಅವರನ್ನು ಎವಿಕ್ಟ್ ಮಾಡಿ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡು ನಂತರ ಬೇರೆಯವರಿಗೆ ಕೊಡಬೇಕು. ಅದನ್ನು ಬಿಟ್ಟು ಸುಮ್ಮನೆ ಕಛೇರಿಯಲ್ಲಿ ಕುಳಿತುಕೊಂಡು ಯಾರು ಅರ್ಜಿ ಹಾಕುತ್ತಾರೋ ಅವರಿಗೆ ಆ ಅರ್ಜಿಯ ಮೇಲೆ ಗ್ರಾಂಟ್ ಮಾಡಿದ್ದೇವೆಂದರೆ ಹೇಗಾಗುತ್ತದೆ ? They have not put in possession all these grantees. That is why all this trouble has arisen. What steps are you going to take against your officers for not evicting the persons who are in unauthorised occupation and then granting lands to the landless people according to the rules ?

ಶ್ರೀ ಎಸ್. ಲಿಂಗಯ್ಯ.—೧೫೨ ಎಕರೆ ಜಮೀನು ಏನು ಎನ್‌ಕ್ರೋಚ್ ಆಗಿತ್ತು ಅದನ್ನು ಎವಿಕ್ಟ್ ಮಾಡಿದ್ದೇವೆ ಮತ್ತು ೪೦ ಜನ ಎವಿಕ್ಟರ್ಸ್ ಅನ್ನು ಹೊರಗಡೆ ಹಾಕಿದ್ದೇವೆಂದು ಹೇಳಿದ್ದಾರೆ. ಹಾಗಾದರೆ, ಅವರುಗಳು ಯಾರ್ಯಾರು ಎಂದು ಕೇಳಬಯಸುತ್ತೇನೆ. ಜೊತೆಗೆ, ೧೯೭೦-೧೯೭೦ರಲ್ಲಿ ಪಿಟಿಷನ್ ಕಮಿಟಿಯ ನಾಲ್ಕನೇ ವರದಿಯಲ್ಲಿ ಈ ಬಗ್ಗೆ ಪ್ರಸ್ತಾಪವಾಗಿದೆ. ಆ ಸಂದರ್ಭದಲ್ಲಿ, ಕೋದಂಡರಾಮಪ್ಪ ಎಂಬುವವರು ೨೦೦ ಎಕರೆ ಜಮೀನನ್ನು ಬಗರ್‌ಹುಕುಂ ಸಾಗುವಳಿ ಮಾಡಿದ್ದಾರೆಂಬುದು ಸುಳ್ಳೋ, ನಿಜವೋ ಎಂಬುದನ್ನು ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖೂರ್ಗೆ.—ಈಗ ತಾವು ಏನು ಕೇಳಿದ್ದೀರಿ ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ಆದರೆ ಜಿಲ್ಲಾಧಿಕಾರಿಗಳ ವರದಿ ಪ್ರಕಾರ ಈಗ ಅನೇಕ ಸರ್ವೆ ನಂಬರ್‌ಗಳು ಎನ್‌ಕ್ರೋಚ್‌ಮೆಂಟ್ ಆಗಿವೆ. ಪ್ರತಿಯೊಂದು ಸರ್ವೆ ನಂಬರಿನಲ್ಲಿ ಯಾರ್ಯಾರು ಎನ್‌ಕ್ರೋಚ್ ಮಾಡಿದ್ದಾರೆಂಬ ವಿವರ ಇಲ್ಲ. ಆ ವಿವರವನ್ನು ಹೇಳಬೇಕೆಂದರೆ ಅದು ಸುಮಾರು ೧೫-೨೦ ಪುಟ ಇದೆ. ಸ್ಪೆಸಿಫಿಕ್ ಆಗಿ ಬೇಕಾದರೆ ಪ್ರತ್ಯೇಕವಾಗಿ ಒದಗಿಸಿ ಕೊಡುತ್ತೇನೆ. ರಾಮಪ್ಪ ಎಂಬುವವರು ಎಷ್ಟು ಎಕರೆ ಜಮೀನನ್ನು ಎನ್‌ಕ್ರೋಚ್ ಮಾಡಿದ್ದಾರೆಂಬ ವಿವರ ಬೇಕಾದರೆ ಬೇರೆ ರೀತಿಯಲ್ಲಿ ಒದಗಿಸಿಕೊಡುತ್ತೇನೆ.

ಟಿ. ಚೌಡಯ್ಯ.—ನನಗೆ ದೊರೆತ ಮಾಹಿತಿ ಪ್ರಕಾರ, ಸಿಂಗನಗೊಂಡದ ಸರ್ವೆ ನಂಬರ್ ೫೩, ೯೬, ೧೯೦ ಸಿಂಗಾಪುರದ ಸರ್ವೆ ನಂಬರ್ ೧೬, ಕೃಷ್ಣಾಪುರದ ಸರ್ವೆ ನಂಬರ್ ೭೪, ರಾಮಪುರದ ಸರ್ವೆ ನಂ.೩:೧ ಬಸವನದುರ್ಗದ ಸರ್ವೆ ನಂ. ೩೯, ಅಂಜನಹಳ್ಳಿಯ ಸರ್ವೆ ನಂ. ೭೭ ಮತ್ತು ರಾಮಪುರದ ಸರ್ವೆ ನಂ. ೪೬, ೧೯೮ರಲ್ಲಿ ಇದ್ದ ಜಮೀನನ್ನು ೧೯೭೬-೭೭ರಲ್ಲಿ ಸರ್ಕಾರದವರು ಆನ್ ಆಥರೈಸ್ಡ್ ಕಲ್ಟಿವೇಷನ್ ಎಂದು ಹರಾಜು ಮಾಡಿದ್ದಾರೆ. ಇದೇ ಸರ್ವೆ ನಂಬರುಗಳಲ್ಲಿರತಕ್ಕ ಜಮೀನು ಬೇರೆ ಬಡವರಿಗೆ ಮತ್ತು ಹರಿಜನ-ಗಿರಿಜನರಿಗೆ ಮಜೂರಾತಿಯಾಗಿರತಕ್ಕದ್ದನ್ನು ಮೇಲ್ಪಟ್ಟ ಅಧಿಕಾರಿಗಳ ಮತ್ತು ಸರ್ಕಾರದ ಗಮನಕ್ಕೆ ತರಲಾಗಿದೆ. ನಾಯಕರ ಸಂಘದ ಕಾರ್ಯದರ್ಶಿಯವರು ಈ ಬಗ್ಗೆ ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದಾರೆ. ಸರ್ಕಾರ ಏಕೆ ಅದರ ಮೇಲೆ ಕ್ರಮ ತೆಗೆದುಕೊಳ್ಳದೆ ಏಳೆಂಬ ಮಾಡಿದೆ ? ಗ್ರಾಂಟ್ ಆಗಿರುವುದನ್ನು ಏಕೆ ಸ್ವಾಧೀನಕ್ಕೆ ಕೊಟ್ಟಿಲ್ಲ ಇವತ್ತಿನ ದಿವಸ ಶ್ರೀಮಂತರಂ ಮತ್ತು ದೊಡ್ಡ ದೊಡ್ಡ ಜಮೀನ್ದಾರರು ಎನ್‌ಕ್ರೋಚ್ ಮಾಡಿ ಇಲ್ಲೀಗಲ್ ಆಗಿ ಕಲ್ಟಿವೇಷನ್ ಮಾಡಿರತಕ್ಕದ್ದು ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಇಷ್ಟಾದರೂ ಕೂಡ ಬಡವರಿಗೆ ಮೋಕ್ಷ ದೊರೆಯಲಿಲ್ಲ. ಸರ್ಕಾರದವರು ಈ ಬಗ್ಗೆ ಏನಾದರೂ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೀರಾ ? ಈಗಲೂ ಕೂಡ ಕಬ್ಬು ವಗೈರೆ ಕಮರ್ಷಿಯಲ್ ಕ್ರಾಪ್‌ಗಳನ್ನು ಸ್ಟಾಂಡಿಂಗ್ ಕ್ರಾಪ್ಸ್ ಎಂದು ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದಾರೆ. ಈ ಬಗ್ಗೆ ವಿಚಾರಣೆ ಮಾಡಲು ಸ್ಥಳೀಯ ಅಧಿಕಾರಿಗಳನ್ನು ಕಳುಹಿಸಿಕೊಟ್ಟರೆ ಪ್ರಯೋಜನವಾಗುವುದಿಲ್ಲ. ಸಿ.ಓ.ಡಿ.ಗೆ ರೆಫರ್ ಮಾಡಿದರೆ ಅಕ್ರಮಗಳನ್ನು ಸರಿಪಡಿಸಿ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ವರಮಾನ

ಬರುವಂತೆ ಮಾಡಬಹುದು. ಮತ್ತು ಅವರನ್ನು ಎವಿಕ್ಟ್ ಮಾಡಲು ಕ್ರಮ ತೆಗೆದುಕೊಳ್ಳುವುದಕ್ಕೆ ಕೂಡ ಸಹಾಯಕವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ದಯವಿಟ್ಟು ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರಾದ ಚಿಂಡಯ್ಯನವರು ಮತ್ತು ಬಸಪ್ಪನವರು ಹೇಳುವುದು ನಿಜ. ನಿಜವಾಗಿ ಕೆಲವರು ಎನ್‌ಕ್ರೋಚ್ ಮಾಡಿದ್ದಾರೆ. ಕಾನೂನಿಗೆ ವಿರುದ್ಧವಾಗಿ ಯಾರು ಯಾರು ಎನ್‌ಕ್ರೋಚ್ ಮಾಡಿದ್ದಾರೆ ಅವರನ್ನು ಆದಷ್ಟು ಜಾಗ್ರತೆ ಎವಿಕ್ಟ್ ಮಾಡಿಸುತ್ತೇವೆ. ಜಮೀನು ಇಲ್ಲದ ಹರಿಜನ ಗಿರಿಜನರಿಗೆ ಕಾನೂನು ಪ್ರಕಾರ ರೆಗ್ಯುಲರೈಸ್ ಮಾಡಿಸುತ್ತೇವೆ. ಸೆಕ್ಷನ್ ೨೪ರ ಪ್ರಕಾರ ಎವಿಕ್ಟ್ ಮಾಡಿ ಯಾರು ಯಾರಿಗೆ ಪೊಸಿಷನ್ ಕೊಡಬೇಕು ಎಂಬುದನ್ನು ವಿಚಾರಣೆ ಮಾಡಿಸಿ ಯಾರು ಯಾರು ಎನ್‌ಕ್ರೋಚ್ ಮಾಡಿದ್ದಾರೋ ಅವರಿಂದ ಬಡವರಿಗೆ ಕೊಡಿಸುವ ವ್ಯವಸ್ಥೆಯನ್ನು ಮಾಡಿಸುತ್ತೇವೆ.

ಶ್ರೀ ಟಿ. ಚೌಡಯ್ಯ.—ಸರ್ಕಾರಕ್ಕೆ ಬರತಕ್ಕ ವರಮಾನ ಬರದೇ ದುರುಪಯೋಗವಾಗುತ್ತಿದೆ. ಆದ್ದರಿಂದ ಅಧಿಕಾರಿಗಳ ಮೇಲೆ ತೀವ್ರವಾದ ವಿಚಾರಣೆ ನಡೆಸುತ್ತೀರಾ ?

ಶ್ರೀ ಎಸ್. ಲಿಂಗಯ್ಯ.—ಎನ್‌ಕ್ರೋಚ್‌ಮೆಂಟ್ ಆಗಿದೆ ಎಂಬ ವಿಚಾರವನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಎನ್‌ಕ್ರೋಚ್‌ಮೆಂಟ್ ಆಗಿರುವುದು ಎರಡು ಎಕರೆ, ೫ ಎಕರೆ, ೧೦ ಎಕರೆ ಅಲ್ಲ. ೧೦೦–೨೦೦ ಎಕರೆ ಮಾಡಿದ್ದಾರೆ. ನಾನು ಬೇಕಾದರೆ ಈ ಬಗ್ಗೆ ಸ್ಪಷ್ಟವಾದ ನಿದರ್ಶನಗಳನ್ನು ಕೊಡುತ್ತೇನೆ. ನಾಲ್ಕನೇ ಪಿಟಿಷನ್ ಕಮಿಟಿಗೆ ೧೯೭೦ರಲ್ಲಿ ಜನರು ಮನವಿ ಸಲ್ಲಿಸಿದ್ದು ಆಗ ಸರ್ಕಾರ ಕೂಡ ೨೦೦ ಎಕರೆಯನ್ನು ಕೋದಂಡರಾಮಪ್ಪ ಎಂಬುವವರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆಂದು ಒಪ್ಪಿಕೊಂಡಿದೆ. ಈ ರೀತಿ ವ್ಯಾಪಕವಾಗಿರುವ ಎನ್‌ಕ್ರೋಚ್‌ಮೆಂಟ್‌ನಿಂದ ಬಡವರಿಗೆ ಬಹಳ ಅನ್ಯಾಯವಾಗಿದೆ. ಆದ್ದರಿಂದ ಈ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಈಗಾಗಲೇ ಅಧಿಕಾರಿಗಳು ಜಮೀನುದಾರರ ಜೊತೆ ಸಾಮಿಲಾಗಿ ಅವರು ಬೆಳೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದ್ದರಿಂದ ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು ಮತ್ತು ತನಿಖೆ ಯಾವ ರೂಪದಲ್ಲಿ ಮಾಡುತ್ತೀರಿ, ಯಾರನ್ನಾದರೂ.....

ಅಧ್ಯಕ್ಷರು.—ಹೇಳಿಯಾಗಿದೆ ಯಲ್ಲಾ ? ಮತ್ತೆ ರಿಪೀಟ್ ಮಾಡುತ್ತಿದ್ದೀರಲ್ಲ ?

ಶ್ರೀ ಎಸ್. ಲಿಂಗಯ್ಯ.—ವಿಶೇಷ ಜಿಲ್ಲಾಧಿಕಾರಿಗಳನ್ನು ಕಳುಹಿಸುತ್ತೀರಾ ? ಅಲ್ಲಿ ಏನಾಗುತ್ತಿದೆ ಯೆಂದರೆ ನಾವು ಗಮನ ಸೆಳೆಯುವ ಸೂಚನೆ ಕಳುಹಿಸಿದ ಮೇಲೆ ಕಡಲೆ ಗಿಡವನ್ನು ಕಿತ್ತುಹಾಕಿದ್ದಾರೆ. ಆ ದೃಷ್ಟಿಯಿಂದ ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಸರ್ಕಾರಕ್ಕೆ ಇದರಿಂದ ಲುಕ್ಸಾನಾಗುತ್ತದೆ. ೪–೫ ಲಕ್ಷ ರೂಪಾಯಿ ಸರ್ಕಾರಕ್ಕೆ ವರಮಾನ ಬರುವಂಥಾದ್ದು ಹೋಗುತ್ತಿದೆ. ಕ್ರಾಪ್ ಅಟಾಚ್ ಮಾಡಿ ತೆಗೆದುಕೊಂಡರೆ ಸರ್ಕಾರಕ್ಕೆ ನಾಲ್ಕೈದು ಲಕ್ಷ ರೂಪಾಯಿ ಪಾವತಿ ಆಗುತ್ತದೆ. ಆದ್ದರಿಂದ ತನಿಖೆಯನ್ನು ತೀವ್ರವಾಗಿ ಮಾಡಬೇಕು ಮತ್ತು ಯಾವ ರೂಪದಲ್ಲಿ ತನಿಖೆ ಮಾಡುತ್ತೀರಿ ಎಂಬ ಬಗ್ಗೆ ಆಶ್ವಾಸನೆ ಕೊಡಬೇಕು. ಅನ್‌ಆಥರೈಸಾಗಿ ಏನು ಎನ್‌ಕ್ರೋಚ್ ಮಾಡಿದ್ದಾರೆ ಅದು ಪಡಾಲ್ಯಾಂಡ್ ಎಂದು ಕೆಲವು ಸರ್ವೇ ನಂಬರ್‌ಗಳನ್ನು ರೆಕಾರ್ಡ್‌ನಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ತೋರಿಸಿದ್ದಾರೆ. ಒಂಗಿರುವುದರಿಂದ ರೆಗ್ಯುಲರೈಸ್ ಮಾಡುತ್ತೇವೆಂದು ಏನು ಹೇಳುತ್ತೀರಿ ಇದನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಅವರು ರೆಕಾರ್ಡ್ಸ್ ಸೃಷ್ಟಿಸಿ ಈ ಸದನವನ್ನು ತಪ್ಪುದಾರಿಗೆ ಎಳೆಯುವ ಕೆಲಸವನ್ನು ಅಧಿಕಾರಿಗಳು ಮಾಡುವ ಸಾಧ್ಯತೆ ಇದೆ. ಆದ್ದರಿಂದ ಅಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಬೇಕು, ಜೊತೆಗೆ ತೀವ್ರವಾದ ವಿಚಾರಣೆ ನಡೆಸಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಪೂರ್ತಿ ಉತ್ತರವನ್ನು ಕೊಡಲಿಲ್ಲ. ಅಧಿಕಾರಿಗಳು ಕಾನೂನನ್ನು ಪರಿಪಾಲನೆ ಮಾಡಿಲ್ಲ, ಅವರು ಕಾನೂನಿಗೆ ವಿರುದ್ಧವಾಗಿ ಮಾಡಿದ್ದಾರೆಂದರೆ ತಪ್ಪಾಗಲಾರದು. ಜಮೀನು ಗ್ರಾಂಟ್ ಮಾಡಬೇಕಾದರೆ ಬಗರ್ ಹುಕುಂನಲ್ಲಿದ್ದಾಗ according to land revenue rules, the unauthorised person should be evicted and then the land should be granted, ನಿಮ್ಮ ಅಧಿಕಾರಿಗಳು ಏನು ಮಾಡುತ್ತಾರೆಂದರೆ They do not follow the procedure laid down

under the law. ಹೀಗಾಗಿ ಈ ಕೇಸಿನಲ್ಲಿ ಬಡಜನರಿಗೆ ತೊಂದರೆಯಾಗಿದೆ, ಕಾನೂನು ಪರಿಪಾಲನೆ ಮಾಡದೇ ಇರತಕ್ಕ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ಕೆಲವು ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ನಾನೇ ಹೇಳಿದೆ. ಅದನ್ನು ಸರಿಪಡಿಸುವುದಕ್ಕೆ ಸ್ಪೆಷಲ್ ಡೆಪ್ಯುಟಿ ಕಮೀಷನರ್ ಅಥವಾ ಡೆಪ್ಯುಟಿ ಕಮೀಷನರ್ ರವರಿಂದ ಪೂರ್ತಿಯಾಗಿ ಎನ್‌ಕ್ವೈರಿ ಮಾಡಿಸಿ ಸರ್ವೇ ಕೂಡ ಮಾಡಿಸಬೇಕಾಗುತ್ತದೆ. ಯಾರು ಯಾರು ಕಲ್ಟಿವೇಟರ್ಸ್ ಸರ್ಕಾರಿ ಜಮೀನನ್ನು ಎಷ್ಟೆಷ್ಟು ಎನ್‌ಕ್ರೋಚ್ ಮಾಡಿದ್ದಾರೆ, ಎಷ್ಟು ಅವರ ವಶದಲ್ಲಿದೆ ಎಂಬುದನ್ನು ಎನ್‌ಕ್ವೈರಿ ಮಾಡಿ ತಿಳಿದುಕೊಂಡ ಮೇಲೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ. ಯಾರ ಯಾರ ಕಾಲದಲ್ಲಿ ಏನಾಗಿದೆ ಎಂಬುದನ್ನು ಕೂಡ ನಾವು ನೋಡಬೇಕು. ೧೯೭೦ರಿಂದ ಹೇಳುತ್ತಿದ್ದೇನೆ. ಇದನ್ನು ಪೂರ್ತಿಯಾಗಿ ಎನ್‌ಕ್ವೈರಿ ಮಾಡಿಸಿ ಯಾವುದೇ ಅಧಿಕಾರಿ ತಪ್ಪಿತಸ್ಥರಾಗಿದ್ದರೆ ಕಾನೂನು ಪ್ರಕಾರ ಅವರಿಗೆ ಶಿಕ್ಷೆ ಕೊಡುತ್ತೇವೆ. ಆದರೆ ಇದನ್ನು ಪೂರ್ತಿಯಾಗಿ ಪರಿಶೀಲಿಸದೇ ಸುಮ್ಮನೆ ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ ಎಗ್ಸಾಮಿನ್ ಮಾಡಿಸಿ ಡೆಪ್ಯುಟಿ ಕಮೀಷನರ್‌ರವರಿಂದ ಪೂರ್ತಿಯಾಗಿ ಎನ್‌ಕ್ವೈರಿ ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತೇವೆ. ಯಾವ ಬಡವರಿಗೆ ನ್ಯಾಯ ಕೊಡಬೇಕೋ ಅದನ್ನು ಕೊಡುತ್ತೇವೆ. ಬಡವರ ಹೆಸರಿನ ಮೇಲೆ ಏನು ಎನ್‌ಕ್ರೋಚ್ ಮಾಡಿದ್ದಾರೆ ಅಂಥಾದ್ದನ್ನು ಎಗ್ಸಾಮಿನ್ ಮಾಡಿಸಿ ಜಿಲ್ಲಾಧಿಕಾರಿಗಳಿಂದ ವರದಿ ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ)—ಮಾನ್ಯ ಅಧ್ಯಕ್ಷರೇ, ಮೈಸೂರಿನ ಸರ್ವೋದಯ ಕುಷ್ಠ ಕಲ್ಯಾಣ ಕಾರ್ಯಕರ್ತೆ ಸಂಬಂಧಪಟ್ಟ ಕುಂದುಕೊರತೆಗಳ ಅರ್ಜಿಯನ್ನು (ಸಂಘದ ಅಧ್ಯಕ್ಷರಾದ ಶ್ರೀ ಆರ್. ಎಸ್. ಮುರಳಿಯವರು ಸಹಿ ಮಾಡಿರುತ್ತಾರೆ) ಸಭೆಯ ಮುಂದೆ ಮಂಡಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು.—ಅರ್ಜಿ ಸಲ್ಲಿಸಲ್ಪಟ್ಟಿದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ನಮೂದಾಗಿರ ತಕ್ಕ ಹುಸೇನ್‌ಪುರ ಗ್ರಾಮಸ್ಥರು ಸಹಿ ಮಾಡಿರುವ ಮನವಿಯನ್ನು ಸಭೆಗೆ ಒಪ್ಪಿಸುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು.— ಅರ್ಜಿ ಸಲ್ಲಿಸಲ್ಪಟ್ಟಿದೆ.

REPRESENTATION BY MEMBERS

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ)—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಇಂಡಿಯನ್ ಎಕ್ಸ್‌ಪ್ರೆಸ್ ನಲ್ಲಿ ಒಂದು ಹೇಳಿಕೆ ಪ್ರಕಟವಾಗಿದೆ.

ಅಧ್ಯಕ್ಷರು.—ಪೂರ ಪ್ರಸ್ತಾಪಕ್ಕೆ ಹೋಗುವುದು ಬೇಡ. ನಾನು ನೋಡಿದ್ದೇನೆ, ತಾವೂ ಒಂದು ಪತ್ರ ಬರೆದಿದ್ದೀರಿ. ಅದರ ಬಗ್ಗೆ ಸಭೆಯ ಕಲಾಪದಲ್ಲಿ.....

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಸಭೆಯ ಸದಸ್ಯರ ಮೇಲೆ ಬೇಕು ಎಂದು ಮನಸ್ಸೇಚ್ಛೆಯಾಗಿ ಬರೆಯುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. ಮನಸ್ಸಿಗೆ ಬಂದಹಾಗೆ ಸ್ಟೇಟ್‌ಮೆಂಟ್ ಕೊಟ್ಟರೆ ಪ್ರತಿಯೊಬ್ಬರಿಗೂ ಆತ್ಮಗೌರವ.....

ಅಧ್ಯಕ್ಷರು.—ಪತ್ರಿಕೆಯಲ್ಲಿ ಓದಿದಮೇಲೆ ನನಗೂ ಕೂಡ ಮನಸ್ಸಿಗೆ ಖೇದವಾಗಿದೆ. ತಮ್ಮ ಹೆಸರು ಅಲ್ಲಿ ಎಳೆಯಲ್ಪಟ್ಟಿದೆ. ಅದರ ಬಗ್ಗೆ ಸರಿಯೋ ತಪ್ಪೋ ಎಂಬ ನಿಲುವನ್ನು ತಾಳಬೇಕಾಗಿದೆ. ಅದನ್ನು ವಿಶದೀಕರಿಸಬೇಕಾಗಿದೆ. ಆದರೆ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ನಮ್ಮ ಕಾನೂನು ಪ್ರಕಾರ ಈ ಸಭೆಯಲ್ಲಿ ಅವಕಾಶ ಕೊಡುವುದಾದರೆ ಕಾನೂನು ಚೌಕಟ್ಟಿನಲ್ಲೇ ನೋಡಬೇಕಾಗುತ್ತದೆ. ಇಲ್ಲಿ ತಮ್ಮ ವಿಷಯ ಪ್ರಸ್ತಾಪವಾಗಿರುವುದರಿಂದ ಮತ್ತು ಇದು ಪತ್ರಿಕೆಯಲ್ಲಿ ಬಂದಿರುವುದರಿಂದ ಅದರ ಬಗ್ಗೆ ಹೇಗೆ ಏನು ಮಾಡಬೇಕು ಎಂಬುದನ್ನು ಅಭ್ಯಾಸಮಾಡಿ ನಾಳೆ ಅದರ ಬಗ್ಗೆ ವಿಚಾರ ಮಾಡಿ ಹೇಳುತ್ತೇನೆ.